ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ

Spl.C.(NDPS) 50/2024

ಪ್ರಾಸಾಃ **2** ಚಾಸಾಃ **1**

**ದಿನಾಂಕಃ 23-07-2025**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | :- ನವೀನ್ ಪಿ ಎಂ |
| ತಂದೆಯ ಹೆಸರು | :- ಮುನಿರೆಡ್ಡಿ |
| ವಯಸ್ಸು | :- 41 ವರ್ಷ |
| ಉದ್ಯೋಗ | :- ವೃತ್ತ ನಿರೀಕ್ಷಕರು, ರಾಬರ್ಟ್‌-ಸನ್ ಪೇಟೆ |
| ವಾಸ ಸ್ಥಳ | :- ಕೆಜಿಎಫ್ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

ನಾನು **04-10-2023** ರಿಂದ ಇಲ್ಲಿಯವರಿಗೆ ರಾಬರ್ಟ್‌-ಸನ್ ಪೇಟೆ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 03-09-2024 ರಂದು ಮದ್ಯಾಹ್ನ 12-45 ಗಂಟೆಗೆ ಗಾಂಧಿ ಸರ್ಕಲ್ ಬಳಿ ಇರುವಾಗ ಪಾರಂಡಹಳ್ಳಿ ಕ್ಯಾಸಂಬಳ್ಳಿಗೆ ಹೋಗುವ ರಸ್ತೆಯ ಕ್ರಿಕೇಟ್ ಮೈದಾನದ ಯಾರೋ ಆಸಾಮಿಗಳು ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂತು. ಕಚೇರಿಗೆ ವಾಪಸ್ಸಾಗಿ ಸದರಿ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದಿಸಿದೆ. ಮಾನ್ಯ ಉಪಾಧೀಕ್ಷಕರಿಗೆ ದಾಳಿ ಮಾಡಲು ಅನಮತಿ ಕೋರಿ ಪತ್ರ ಬರೆದೆ. ಅದನ್ನು ನಿಪಿ-5 ಎಂದು, ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ತಹಸೀಲ್ದಾರ್ ರವರಿಗೆ ಪಂಚರನ್ನು ಕಳುಹಿಸಲು ಪತ್ರ ಬರೆದಿದ್ದೇನೆ. ಅದನ್ನು ನಿಪಿ-6 ಎಂದು, ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಪಂಚರಾದ ಚಾಸಾ-2 ಮತ್ತು 3 ಕಚೇರಿಗೆ ಹಾಜರಾದರು. ಅವರಿಗೆ ಮಾಹಿತಿ ತಿಳಿಸಿ ನಿಪಿ-1 ರಂತೆ ನೋಟೀಸು ಜಾರಿ ಮಾಡಿದ್ದೇನೆ. ನನ್ನ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಎರಡು ವಾಹನಗಳಲ್ಲಿ ನಾವು, ಪಂಚರು ಪಾರಾಂಡಹಳ್ಳಿ- ಕ್ಯಾಸಂಬಳ್ಳಿ ಹತ್ತಿರ ಇರುವ ಕ್ರಿಕೇಟ್ ಮೈದಾನದ ಬಳಿ ಹೋದೆವು. ಜೀಪನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ಒಬ್ಬ ಪೊಲೀಸ್ ಪೇದೆಯನ್ನು ಯಾರಾದರೂ ಇರುವ ಬಗ್ಗೆ ನೋಡಿಕೊಂಡು ಬರುವ ಬಗ್ಗೆ ನಾನು ಸೂಚಿಸಿದೆ. ಒಬ್ಬ ಪೇದೆ ಮೈದಾನದ ಒಳಗೆ ಹೋಗಿ ಆಸಾಮಿಗಳು ಇದ್ದಾರೆಂದು ಕೈ ಸಃಜ್ಞೆ ಮಾಡಿದರು. ನಾವೆಲ್ಲರೂ ಹೋಗಿ ನೋಡಲಾಗಿ ಇಬ್ಬರು ಆಸಾಮಿಗಳು ಇದ್ದರು. ಅವರ ಹತ್ತಿರ ಪ್ಲಾಸ್ಟಿಕ್ ಗೋಣೀಚೀಲ ಇತ್ತು. ಆಸಾಮಿಗಳು ನಮ್ಮನ್ನು ನೋಡಿ ಓಡಿದರು, ಅಲ್ಲೇ ಇದ್ದ ನನ್ನ ಸಿಬ್ಬಂದಿ ಅವರನ್ನು ಹಿಡಿದುಕೊಂಡು ಬಂದರು. ನಾನು ಅವರಿಬ್ಬರ ಹೆಸರು ವಿಳಾಸ ಪಡೆದುಕೊಂಡೆ. 15 ನಿಮಿಷದ ನಂತರದಲ್ಲಿ ನಾನು ಚಾಸಾ-13 ಪತ್ರಾಂಕಿತ ಅಧಿಕಾರಿಯಾಗಿ ಬರಲು ಕೇಳಿಕೊಂಡೆ. ಆ ಸಮಯದಲ್ಲಿ ಪರಸ್ಪರ ಅಂಗಶೋಧನೆ ಮಾಡಿಕೊಂಡೆವು. ಚಾಸಾ-13 ರವರು ಆರೋಪಿಗಳಿಗೆ ತಾನೇ ಅಂಗಶೋಧನೆ ಮಾಡಬಹುದೇ ಎಂದು ಕೇಳಿದರು. ಆರೋಪಿಗಳು ಅದಕ್ಕೆ ಒಪ್ಪಿಗೆ ನೀಡಿದ್ದಾರೆ. ನಾನು ಚೀಲವನ್ನು ತೆರೆದು ನೋಡಲಾಗಿ ಒಣ ಗಾಂಜಾ ಸೊಪ್ಪು ಇತ್ತು. ಆರೋಪಿಗಳನ್ನು ವಿಚಾರಿಸಲಾಗಿ ಗಡಿಭಾಗದಿಂದ ಮಾರಾಟ ಮಾಡಲು ತಂದಿದ್ದಾಗಿ ಹೇಳಿದರು. ನಾನು ತೂಕ ಮಾಡಿಸಲಾಗಿ 6 ಕೆಜಿ ಗಾಂಜಾ ಇತ್ತು. ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಎಂಎಸ್ ಎಂಬ ಸೀಲ್ ಹಾಕಿಸಿದೆ. ನಂತರ ಸ್ಥಳದಲ್ಲಿ ಪಂಚನಾಮೆ ಮಾಡಿದೆವು. ಅದನ್ನು ನಿಪಿ-2 ಎಂದು ಗುರುತಿಸಲಾಗಿದೆ. ನಿಪಿ-2(ಸಿ) ನನ್ನ ಸಹಿ. ಆ ಸಮಯದಲ್ಲಿ 4 ಫೋಟೋಗಳನ್ನು ತೆಗೆಸಿದೆ. ಅವುಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಗಿದೆ. ಮದ್ಯಾಹ್ನ 01-30 ರಿಂದ 03-30 ವರಿಗೂ ಪಂಚನಾಮೆ ಮಾಡಿದೆ. ಆ ದಿನ ಮುದ್ರೆಯನ್ನು ಫ್ರಾಸಾ-1 ರವರಿಗೆ ಕೊಟ್ಟಿದ್ದೇನೆ. ಆ ದಿನ ಮುದ್ರೆ ಕೊಟ್ಟ ಬಗ್ಗೆ ಸ್ವೀಕೃತಿಯನ್ನು ನಿಪಿ-4 ರಂತೆ ಪಡೆದಿದ್ದೇನೆ.

ನಂತರ ವಶಪಡಿಸಿಕೊಂಡ ಮಾಲು, ಆರೋಪಿಗಳ ಸಮೇತ ಠಾಣೆಗೆ ವಾಪಸ್ಸಾದೆ. ಒಂದು ವರದಿಯನ್ನು ಠಾಣಾಧಿಕಾರಿಗೆ ನೀಡಿದೆ. ಅದನು ನಿಪಿ-7 ಎಂದು, ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಿಪಿ-3 ರ ಫೋಟೋಗಳಲ್ಲಿ ಆರೋಪಿಗಳು ಕಂಡು ಬರುತ್ತಾರೆ, ವಶಪಡಿಸಿಕೊಂಡ ಗಾಂಜಾ ಕಂಡು ಬರುತ್ತದೆ. ಆರೋಪಿಗಳನ್ನು ನೋಡಿ ಗುರುತಿಸಿದ್ದೇನೆ.

ಪಾಟೀ ಸವಾಲುಃ 1 ನೇ ಆರೋಪಿತನ ಪರ ಶ್ರೀ ಎಂವಿ ವಕೀಲರಿಂದಃ

ಈ ಪ್ರಕರಣದಲ್ಲಿ ದೂರುದಾರ ನಾನೇ ಎಂದರೆ ಸರಿ. ಆ ದಿನ ಮದ್ಯಾಹ್ಷ 12-45 ಗಂಟೆಗೆ ಮಾಹಿತಿ ಬಂದಿದೆ. ಆ ದಿನ ಮದ್ಯಾಹ್ಷ 01-00 ಗಂಟೆಗೆ ದಾಳಿಗೆ ಹೋಗಲು ಠಾಣೆ ಬಿಟ್ಟಿದ್ದೇನೆ. ಮದ್ಯಾಹ್ಷ 12-50 ಗಂಟೆಗೆ ಚಾಸಾ-13 ರವರಿಗೆ ಮನವಿ ಸಲ್ಲಿಸಿದ್ದೇನೆ. ನಿಪಿ-6 ರಲ್ಲಿ ಬೆಳಗ್ಗೆ 11-00 ಗಂಟೆಗೆ ಪಂಚರನ್ನು ಕಳುಹಿಸಿಕೊಡಿ ಎಂದು ಬರೆಯಲಾಗಿದೆ ಎಂದರೆ ಸರಿ. ಕಣ್‌ತಪ್ಪಿನಿಂದ ವೇಳೆ ನಮೂದಿಸುವುದು ತಪ್ಪಾಗಿದೆ. ಮದ್ಯಾಹ್ಷ 12-55 ಗಂಟೆಗೆ ಪಂಚರು ಠಾಣೆಗೆ ಬಂದಿದ್ದಾರೆ. ಸಿಬ್ಬಂದಿಗೆ ಯಾವುದೇ ನೋಟೀಸು ಜಾರಿ ಮಾಡಿಲ್ಲ, ಕಾರಣ ಅವಶ್ಯಕತೆ ಇಲ್ಲ. ನನ್ನ ದೂರಿನಲ್ಲಿ ಪಂಚರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ದೂರಿನಲ್ಲಿ ಮೂರು ಜನ ಆಸಾಮಿಗಳು ಗುನ್ನೆ ಜಾಗೆಯಲ್ಲಿ ಇರುವ ಬಗ್ಗೆ ಬರೆದಿದ್ದೇನೆ. ಕಣ್‌ತಪ್ಪಿನಿಂದ ಮೂರು ಆಸಾಮಿಗಳು ಎಂದು ಮುದ್ರಿತಗೊಂಡಿದೆ. ದಿನಾಂಕ 03-08-2024 ರಂದು ಮದ್ಯಾಹ್ಷ 03-30 ಗಂಟೆಗೆ ದೂರು ಸ್ವೀಕರಿಸಿದ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿ. ನಿಪಿ-7 ರಲ್ಲಿ ಮದ್ಯಾಹ್ಷ 01-30 ಗಂಟೆಗೆ ವಾಹನವನ್ನು ನಿಲ್ಲಿಸಿದ ಬಗ್ಗೆ ಬರೆಯಲಾಗಿದೆ ಎಂದರೆ ಸರಿ. ಐವತ್ತು ಮೀಟರ್ ದೂರದ ಅಂತರದಲ್ಲಿ ವಾಹನವನ್ನು ಮರೆಯಾಗಿ ನಿಲ್ಲಿಸಿದ್ದೆವು. 1-2 ನಿಮಿಷದಲ್ಲಿ ನಮ್ಮ ಠಾಣಾ ಸಿಬ್ಬಂದಿ ನಮಗೆ ಸಃಜ್ಞೆ ನೀಡಿದ್ದಾರೆ. ಆರೋಪಿಗಳು 20 ಮೀಟರ್ ದೂರದಷ್ಟು ಓಡಿದ್ದರು. ಚಾಸಾ-13 ಮದ್ಯಾಹ್ಷ 02-00 ಗಂಟೆಗೆ ಬಂದಿದ್ದಾರೆ. ಅವರು ಬರುವ ಮೊದಲೇ ಪಂಚನಾಮೆ ಪ್ರಾರಂಭಿಸಿದೆವು. ಚಾಸಾ-13 ಬಂದ ನಂತರ ಪಂಚನಾಮೆ ಮುಂದುವರೆದಿದೆ. ಆರೋಪಿಗಳನ್ನು ಹೊರತು ಪಡಿಸಿ ಗುನ್ನೆ ಜಾಗೆಯಲ್ಲಿ ಬೇರೆ ಯಾರೂ ಕಂಡು ಬರಲಿಲ್ಲ. ಆರೋಪಿಗಳ ಬಳಿ ಗಾಂಜಾ ಮಾರಾಟದಿಂದ ಬಂದಿದೆ ಎನ್ನಲಾದ ಹಣ ಇರಲಿಲ್ಲ. ಗಾಂಜಾದಲ್ಲಿ ಹೂ, ಕಡ್ಡಿ, ಬೀಜ ಪ್ರತ್ಯೇಕಿಸಿ ತೂಕ ಮಾಡಲಿಲ್ಲ ಎಂದರೆ ಸರಿ. ಆ ದಿನ ನಾನು ಸಿಬ್ಬಂದಿ ಪಂಚರೊಂದಿಗೆ ಗುನ್ನೆ ಜಾಗೆಗೆ ಹೋಗಿಲ್ಲ ಎಂದರೆ ಸರಿಲ್ಲ. ಸ್ಥಳದಲ್ಲಿ ಆರೋಪಿಗಳು ಇರಲಿಲ್ಲ, ಅವರಿಂದ ಗಾಂಜಾ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಪಂಚರು, ನಾನು ಸಿಬ್ಬಂದಿ ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ, ಆರೋಪಿಗಳು ಯಾವುದೇ ಕೃತ್ಯ ಎಸಗದೇ ಇದ್ದರೂ ಅವರ ವಿರುದ್ದ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಪ್ರಾಸಾಃ 2 ಚಾಸಾಃ 1

ಪಾಟೀ ಸವಾಲುಃ 2ನೇ ಆರೋಪಿತನ ಪರ ಶ್ರೀ ಎನ್ಎ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿದ್ದು, ಒಪ್ಪಿಕೊಂಡಿದೆ.

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

sd/-

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**